ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 18-01-1980.

# *ಸ್ಮೃತಿ ದಿನದಂದು ಮಕ್ಕಳ ಪ್ರತಿ ಬಾಪ್‌ದಾದಾರವರ ಶಿಕ್ಷಣ*

(स्मृति दिवस पर बाप-दादा की बच्चों प्रति शिक्षाएँ)

ಇಂದು ಬಾಪ್‌ದಾದಾ ಸ್ಮೃತಿದಿನದ ಸ್ಮೃತಿಸ್ವರೂಪ ಅರ್ಥಾತ್ ಸಮರ್ಥಸ್ವರೂಪ ಮಕ್ಕಳನ್ನು ನೋಡುತ್ತಾ, ಸದಾ 'ಸಮರ್ಥ ಭವ'ದ ವರದಾನವನ್ನು ಕೊಡುತ್ತಿದ್ದಾರೆ. ಹೇಗೆ ಇಂದಿನ ಈ ಸ್ಮೃತಿದಿನದಲ್ಲಿ ಸ್ವತಹವಾಗಿಯೇ ಸ್ಮೃತಿಸ್ವರೂಪರಾಗಿರುತ್ತೀರಿ, ಒಂದೇ ಲಗನ್ನಿನಲ್ಲಿ ಮಗ್ನ, ಒಬ್ಬ ತಂದೆಯ ಹೊರತು ಅನ್ಯ ಯಾರೂ ಇಲ್ಲ- ಈ ರೀತಿ ಸಹಜಯೋಗಿ, ನಿರಂತರ ಯೋಗಯುಕ್ತ ಜೀವನ್ಮುಕ್ತ, ಫರಿಶ್ತಾಸ್ವರೂಪಭವ.

ಇಂದಿನ ದಿನ ಎಲ್ಲಾ ಮಕ್ಕಳ ಚಾರ್ಟ್‌ನಲ್ಲಿ ತಂದೆಯ ಸಮಾನ ಅವ್ಯಕ್ತ ವತನವಾಸಿ, ಸದಾ ಸ್ನೇಹಿ ಲವಲೀನ ಸ್ಥಿತಿಯಲ್ಲಿರುವುದಿತ್ತು. ಇದೇರೀತಿ ತಂದೆಯ ಸಮಾನ ಅತೀತ ಹಾಗೂ ಪ್ರಿಯರಾಗಿರಿ. ಈ ಸಮರ್ಥದಿನದಂದು ನಾಲ್ಕೂಕಡೆಯಲ್ಲಿರುವ ಮಕ್ಕಳಲ್ಲಿ ತಂದೆಯನ್ನು ಪ್ರತ್ಯಕ್ಷಮಾಡುವ ಒಂದೇ ಧೃಡಸಂಕಲ್ಪವು ಈಗಿನವರೆಗೂ ತಲುಪುತ್ತಿದೆ. ದೇಶ-ವಿದೇಶದ ಎಲ್ಲಾ ಮಕ್ಕಳು ಸೇವೆಯ ಸ್ಟೇಜಿನ ಮೇಲೆ ತಮ್ಮ ಒಂದೇ ಉಮ್ಮಂಗ-ಉಲ್ಲಾಸದ ಸಂಕಲ್ಪದಿಂದ, ಕೆಲವರು ಮನಸ್ಸಿನಿಂದ, ಕೆಲವರು ತನುವಿನಿಂದ ಉಪಸ್ಥಿತರಾಗಿದ್ದಾರೆ. ಎಲ್ಲಾ ಮಕ್ಕಳು ಇಲ್ಲಿದ್ದರೂ ಬಾಪ್‌ದಾದಾರವರ ಮುಂದೆ ಸೇವೆಯ ಉಮ್ಮಂಗ-ಉತ್ಸಾಹ ತುಂಬಿರುವ ಮಕ್ಕಳ ಚಹರೆಯು ಸನ್ಮುಖದಲ್ಲಿದೆ. ಬಾಪ್‌ದಾದಾರವರು ಇಡೀ ವಿಶ್ವದ ಪರಿಕ್ರಮಣ ಹಾಕುವುದರಲ್ಲಿ ಎಷ್ಟು ಸಮಯ ಹಿಡಿಸುತ್ತದೆ? ತಾವು ವಿಜ್ಞಾನದ ಸಾಧನಗಳಾದ ಟಿ.ವಿ., ಅಥವಾ ರೇಡಿಯೋನ ಮೂಲಕ ಸ್ವಿಚ್‌ಆನ್ ಮಾಡಿ ಕೇಳುತ್ತೀರಿ ಅಥವಾ ನೋಡುತ್ತೀರಿ, ಇಷ್ಟೇ ಸಮಯದಲ್ಲಿ ಬಾಪ್‌ದಾದಾರವರು ವಿಶ್ವದ ಪರಿಕ್ರಮಣ ಹಾಕುತ್ತಾರೆ. ಪ್ರತಿಯೊಂದು ಸ್ಥಾನದ ಮಕ್ಕಳು ಏನೇನು ಮಾಡುತ್ತಿದ್ದಾರೆ ಎಂಬುದನ್ನು ಬಾಪ್‌ದಾದಾರವರು ನೋಡುತ್ತಿದ್ದಾರೆ. ಹೇಗೆ ಇಂದಿನ ದಿನದಲ್ಲಿ ಎಲ್ಲರೂ ಒಂದೇ ಸೇವೆಯ ಗುಂಗಿನಲ್ಲಿ ಇದ್ದೀರಿ, ಪ್ರತಿಯೊಬ್ಬರ ಬುದ್ಧಿಯಲ್ಲಿ ಪ್ರತ್ಯಕ್ಷತೆಯ ಬಾವುಟವು ಹಾರುತ್ತಿದೆ- ಅದೇನೆಂದರೆ ವಿಶ್ವದಲ್ಲಿ ಈ ಧ್ವಜಾರೋಹಣವಾಗಲಿ, ಎಲ್ಲರ ಹೃದಯದಲ್ಲಿ ಬಾಪ್‌ದಾದಾರವರಿದ್ದಾರೆ ಮತ್ತು ಬಾಬಾರವರು ನಮ್ಮ ಹೃದಯದಲ್ಲಿದ್ದಾರೆ ಎಂಬುದನ್ನು ಯಾವರೀತಿ ಎಲ್ಲರಿಗೂ ತೋರಿಸುವುದು! ಎಂಬ ಪುರುಷಾರ್ಥವನ್ನು ಪ್ರತ್ಯಕ್ಷದಲ್ಲಿ ತರುತ್ತಿದ್ದೀರಿ. ಈ ಸಮಯದಲ್ಲಿ ಎಲ್ಲರರೂಪವು ನೆನಪಾರ್ಥದಲ್ಲಿ ಗಾಯನವಾಗಿರುವ ಸೇವಕ ಹನುಮಂತನ ಉದಾಹರಣೆಯಂತಿದೆ. ಕೆಲವರು ಸಂಕಲ್ಪದ ಬಾಣವನ್ನು ಹೊಡೆಯುತ್ತಿದ್ದಾರೆ, ಆ ಶ್ರೇಷ್ಠಸಂಕಲ್ಪದಿಂದ ವಾಯುಮಂಡಲ ಮೂಲಕ ತಂದೆಯು ಪ್ರತ್ಯಕ್ಷವಾಗಬೇಕು. ಕೆಲವರು ತಮ್ಮ ಮುಖದ ಸ್ನೇಹಿ ಹಾಗೂ ಶಕ್ತಿಶಾಲಿ ಮಾತಿನಿಂದ ತಂದೆಯನ್ನು ಪ್ರತ್ಯಕ್ಷ ಮಾಡುವುದರಲ್ಲಿಯೇ ನಿರತರಾಗಿದ್ದಾರೆ. ಈ ದೃಶ್ಯವು ಸ್ಮೃತಿ ಹಾಗೂ ಸೇವೆಯ ಸಮತೋಲನ(ಬ್ಯಾಲೆನ್ಸ್) ಇರುವುದನ್ನು ಬಾಪ್‌ದಾದಾರವರು ನೋಡುತ್ತಿದ್ದಾರೆ. ಸ್ನೇಹವೂ ಸಹ ಇಂದು ಸಂಪೂರ್ಣರೂಪದಲ್ಲಿ ಇಮರ್ಜ್ ಆಗಿದೆ ಮತ್ತು ಶಕ್ತಿಸ್ವರೂಪರೂ ಸಹ ಇಂದು ಸೇವಾರ್ಥವಾಗಿ ಇಮರ್ಜ್ ರೂಪದಲ್ಲಿದ್ದಾರೆ. ಇಂದಿನ ಈ ದಿನದಂತೆಯೇ ಸದಾ ನೆನಪು ಮತ್ತು ಸೇವೆಯ ಬ್ಯಾಲೆನ್ಸ್ ನಲ್ಲಿರಬೇಕು.

ಈ 80 ವರ್ಷದಲ್ಲಿ ವಿಶೇಷವಾಗಿ ಪ್ರತಿಯೊಂದು ಆತ್ಮರು ಯಥಾಯೋಗ್ಯ ಆಸ್ತಿಯನ್ನು ಕೊಡುವ ವರ್ಷವಾಗಿದೆ. ಚಡಪಡಿಸುತ್ತಿರುವ ಸರ್ವಾತ್ಮರಿಗೆ ಯಥಾಯೋಗ ತೃಪ್ತಾತ್ಮರನ್ನಾಗಿ ಮಾಡುವ ವರ್ಷವಾಗಿದೆ. ವಿಶೇಷವಾಗಿ ಈ ವರ್ಷದಲ್ಲಿ ಸ್ಮೃತಿ ಮತ್ತು ಸೇವೆಯ ಸಮಾನತೆಯನ್ನಿಡುವುದು ಮತ್ತು ಸದಾ ಆನಂದಸ್ವರೂಪ ಆಗಿರುವುದಾಗಿದೆ. ಜೊತೆಜೊತೆಗೆ ಸರ್ವಾತ್ಮರಿಗೆ

ಆಶೀರ್ವಾದವನ್ನು ಕೊಡುತ್ತಿರುವುದಾಗಿದೆ. ಈ ವರ್ಷದ ಸಂಘಟಿತರೂಪದ ವಿಶೇಷವಾದ ಸ್ಲೋಗನ್ ಆಗಿದೆ **'ಸ್ವಯಂಪ್ರತಿ ಹಾಗೂ ಸರ್ವರಪ್ರತಿ ಸದಾ ವಿಘ್ನವಿನಾಶಕರಾಗಿರುವುದು'** ಅದರ ಸಹಜಸಾಧನವಾಗಿದೆ ಸದಾ ಕಾಲಕ್ಕಾಗಿ ಪ್ರಶ್ನಾರ್ಥಕ ಚಿಹ್ನೆಗೆ ಬೀಳ್ಕೊಡುಗೆ ಕೊಡಬೇಕು ಮತ್ತು ಪೂರ್ಣವಿರಾಮದ ಮೂಲಕ ಸರ್ವಶಕ್ತಿಗಳ ಫುಲ್‌ಸ್ಟಾಕ್ ಜಮ ಮಾಡಿಕೊಳ್ಳುವುದು. ಈ ವರ್ಷದಲ್ಲಿ ವಿಶೇಷವಾಗಿ ಸರ್ವರು ವಿಘ್ನಮುಕ್ತ ಹೊಳೆಯುತ್ತಿರುವ ಫರಿಶ್ತಾ ಡ್ರೆಸ್‌ನ್ನು ಧರಿಸಿರಬೇಕಾಗಿದೆ. ಮಣ್ಣಿನ (ದೇಹ) ಡ್ರೆಸ್‌ನ್ನು ಧರಿಸಬಾರದು ಮತ್ತು ಸದಾ ಸರ್ವಗುಣಗಳ ಆಭರಣಗಳಿಂದ ಶೃಂಗಾರಿತರಾಗಿರಬೇಕು. ವಿಶೇಷವಾಗಿ ಸದಾ ಅಷ್ಟಶಕ್ತಿಗಳ ಶಸ್ತ್ರಗಳಿಂದ ಅಷ್ಟಶಕ್ತಿಗಳ ಶಸ್ತ್ರಧಾರಿ, ಸಂಪನ್ನ ಮೂರ್ತಿಯಾಗಿರಬೇಕು. ಸದಾ ಕಮಲಪುಷ್ಪ ಆಸನದ ಮೇಲೆ ತಮ್ಮ ಶ್ರೇಷ್ಠಜೀವನದ ಕಾಲನ್ನಿಡಬೇಕು. ಮತ್ತೇನು ಮಾಡುವಿರಿ?

**ಸುವಾಸನೆಯುಳ್ಳವರಾಗಿ, ಸುವಾಸನೆ ಯನ್ನು ವ್ಯಾಪಿಸಿ.**

ಪ್ರತಿನಿತ್ಯವೂ ಅಮೃತವೇಳೆಯಲ್ಲಿ ವಿಶ್ವವರದಾನಿ ಸ್ವರೂಪದಿಂದ ವಿಶ್ವಕಲ್ಯಾಣಕಾರಿ ತಂದೆಯ ಜೊತೆಯಲ್ಲಿ ಕಂಬೈಂಡ್ ರೂಪದವರಾಗಿರುತ್ತಾ, ವಿಶ್ವವರದಾನಿ ಶಕ್ತಿ ಮತ್ತು ವಿಶ್ವಕಲ್ಯಾಣಕಾರಿ ಶಿವ. ಶಿವ ಶಕ್ತಿ ಕಂಬೈಂಡ್ ರೂಪದಿಂದ ಮನಸಾ ಸಂಕಲ್ಪ ಹಾಗೂ ವೃತ್ತಿಯ ಮೂಲಕ ಸುಗಂಧದ ಪ್ರಕಂಪನಗಳನ್ನು ಹರಡಬೇಕಾಗಿದೆ. ಹೇಗೆ ವರ್ತಮಾನದ ಸ್ಥೂಲವಾಗಿ ಸುಗಂಧದ ಸಾಧನಗಳಿಂದ ಭಿನ್ನ ಭಿನ್ನ ಪ್ರಕಾರದ ಸುಗಂಧಗಳನ್ನು ಹರಡುತ್ತಾರೆ. ಕೆಲವರು ಗುಲಾಬಿ ಸುಗಂದ, ಕೆಲವರು ಚಂದನದ ಸುಗಂಧ, ಅದೇರೀತಿ ತಮ್ಮ ಮೂಲಕ ಸುಖ, ಶಾಂತಿ, ಶಕ್ತಿ, ಪ್ರೇಮ, ಆನಂದದ ಭಿನ್ನ-ಭಿನ್ನ ಸುಗಂಧವು ಹರಡುತ್ತಿರಬೇಕು. ಪ್ರತಿನಿತ್ಯವೂ ಅಮೃತವೇಳೆಯಲ್ಲಿ ಆತ್ಮರಮೇಲೆ ಶ್ರೇಷ್ಠವಾದ ಭಿನ್ನ-ಭಿನ್ನ ಪ್ರಕಂಪನಗಳು ಕಾರಂಜಿಯಂತೆ ಗುಲಾಬ್‌ಜಲ್ ಹಾಕುತ್ತಿರಬೇಕು. ಕೇವಲ ಸಂಕಲ್ಪದ ಸ್ವಿಚ್ ಆನ್ ಮಾಡಬೇಕು. ಇದಂತು ಬರುತ್ತದೆಯಲ್ಲವೆ ಏಕೆಂದರೆ ವರ್ತಮಾನದಲ್ಲಿ ವಿಶ್ವದಲ್ಲಿ ಅಶುದ್ಧ ವೃತ್ತಿಗಳ ದುರ್ಗಂಧವು ಬಹಳ ಇದೆ, ಅವರಿಗೆ ಸುಗಂಧವನ್ನು ಹಾಕಬೇಕಾಗಿದೆ. ಈ ವರ್ಷದಲ್ಲಿ ಏನು ಮಾಡಬೇಕೆಂದು ತಿಳಿಯಿತೆ?

ಈ ವರ್ಷದಲ್ಲಿ ವರ್ತಮಾನದ ಸರ್ಕಾರದ ಚುನಾವಣೆಯಾಯಿತು ಮತ್ತು ಪಾಂಡವರೇನು ಮಾಡುವಿರಿ. ಈ ವರ್ಷದಲ್ಲಿ ಯಾರೆಲ್ಲಾ ಹಳೆಯ ಮತ್ತು ಹೊಸ ಸೇವೆಯ ಭಿನ್ನ-ಭಿನ್ನ ಸಾಧನಗಳು ಅರ್ಥಾಥ್ ತನು-ಮನ-ಧನ, ಸಮಯ ಮುಂತಾದುವೆನ್ನೆಲ್ಲವೂ ಇದೆಯೋ, ಅದೆಲ್ಲವನ್ನೂ ತೊಡಗಿಸುತ್ತಾ ಅಂತಿಮವಾಗಿ ಸರ್ವಾತ್ಮರಿಂದ ಸೆಲೆಕ್ಟ್ ಮಾಡಿ ಎಂತಹ ಆತ್ಮರು ಮುಕ್ತಿಯ ಆಸ್ತಿಗೆ ಯೋಗ್ಯರಾಗಿದ್ದಾರೆ ಮತ್ತು ಎಂತಹ ಆತ್ಮರು ಜೀವನ್ಮುಕ್ತಿಗೆ ಯೋಗ್ಯರಾಗಿದ್ದಾರೆ. ಯಾರು ಯಾವುದರಲ್ಲಿ ಯೋಗ್ಯರಿದ್ದಾರೆಯೋ, ಅವರಿಗೆ ಅದೇ ಸಂದೇಶವನ್ನು ಕೊಟ್ಟು ಫೈನಲ್ ಮಾಡಿರಿ. ಈಗ ಸೇವೆಯ ಫೈಲ್‌ನ್ನು ಫೈನಲ್ ಮಾಡಿರಿ. ಹೇಗೆ ಫೈಲ್‌ನ ಪ್ರತಿಯೊಂದು ಕಾಗದದಲ್ಲಿ ಆಫೀಸರುಗಳು ತಮ್ಮ ಸಹಿಯಿಂದ ಸಂಪನ್ನ ಮಾಡುತ್ತಾ ಮುಂದೆ ಸಾಗುತ್ತದೆ. ಅಂದಾಗ ತಾವೆಲ್ಲಾ ಸೇವಾಧಾರಿ ಪ್ರತಿಯೊಂದು ಆತ್ಮನಬಗ್ಗೆ ಮುಕ್ತಿ ಅಥವ ಜೀವನ್ಮುಕ್ತಿಯ ಸಹಿಯನ್ನು ಮಾಡಿರಿ. ಫೈನಲ್ ಸ್ಟಾಂಪ್ ಹಾಕಿದಾಗ ಫೈಲ್ ಸಂಪೂರ್ಣವಾಗುತ್ತದೆ. ಈ ವರ್ಷದಲ್ಲಿ ಏನು ಮಾಡಬೇಕೆಂದು ತಿಳಿಯಿತೆ? ಸೆಲೆಕ್ಷನ್‌ನ ಮೆಷಿನರಿಯನ್ನು ತೀವ್ರಮಾಡಿಕೊಳ್ಳಬೇಕಾಗಿದೆ. ಎಷ್ಟು ಸಮಯದಲ್ಲಿ ಫೈಲ್ ತಯಾರು ಮಾಡುತ್ತೀರೆಂದು ನೋಡುತ್ತೇವೆ. ಮೊದಲು ವಿದೇಶದವರು ಫೈಲ್ ತಯಾರು ಮಾಡುತ್ತಾರೆಯೇ ಅಥವಾ ದೇಶದವರೇ, ಯಾರು ಯಾವ ಧರ್ಮದಲ್ಲಿ ಹೋಗಬೇಕಾಗಿದೆ ಎಂಬ ಸ್ಟಾಂಪ್ ಹಾಕಿಬಿಡಬೇಕು.

ಇಂದು ಬಾಪ್‌ದಾದಾರವರು ನಾಲ್ಕೂಕಡೆಯಲ್ಲಿರುವ ಸರ್ವಸ್ನೇಹಿ ಮತ್ತು ಸೇವಾಧಾರಿ ಮಕ್ಕಳಿಗೆ ನೆನಪು-ಪ್ರೀತಿಯನ್ನು ಕೊಡುತ್ತಿದ್ದಾರೆ. ಇಂದಿನ ದಿನದಂದು ತನುವಿನಿಂದ ಭಲೆ ಭಿನ್ನ-ಭಿನ್ನ ಸ್ಥಾನಗಳಿರಬಹುದು ಆದರೆ ಮನಸ್ಸಿನಿಂದ ತಂದೆಯನ್ನು ಪ್ರತ್ಯಕ್ಷಗೊಳಿಸುವ ಗುಂಗಿರುವ ಕಾರಣದಿಂದ, ತಂದೆಯೇ ಕಡೆಯೇ 'ಮನ್ಮನಾಭವ' ವಾಗಿದ್ದೀರಿ.

**ಸದಾ ಇಂತಹ ಸ್ನೇಹ ಮತ್ತು ಸೇವೆಯಲ್ಲಿ ಅವಿನಾಶಿಯಾಗಿರುವ, ಸದಾ ತಂದೆಯ ಸೇವೆಯಲ್ಲಿ ತತ್ಪರರಾಗಿರುವ, ಪ್ರತ್ಯಕ್ಷತೆಯ ಧ್ವಜಾರೋಹಣವನ್ನು ಮಾಡುವ, ಸರ್ವ ವಿಜಯಿ ಮಕ್ಕಳಿಗೆ ನೆನಪು- ಪ್ರೀತಿ ಹಾಗೂ ನಮಸ್ತೆ.**

ಬಾಪ್‌ದಾದಾರವರಿಗೂ ಮುದ್ದಾದ ಮಕ್ಕಳಬಗ್ಗೆ ಗೌರವವನ್ನು ಇಡಲಾಗುತ್ತದೆ. ಆದ್ದರಿಂದ ಬಾಪ್ ದಾದಾರವರು ಶುಭಾಷಯಗಳನ್ನು ಕೊಡುತ್ತಾರೆ, ಬೀಳ್ಕೊಡುಗೆಯನ್ನು ಕೊಡುವುದಿಲ್ಲ. ಇವರಂತು ಮಸ್ತಫಕೀರರಾಗಿದ್ದಾರೆ, ತಂದೆಯು ಮಕ್ಕಳಜೊತೆಯಲ್ಲಿ ಸಾಕಾರನ ಮೂಲಕ ವಿಶ್ವದ ಪರಿಕ್ರಮಣವನ್ನೂ ಮಾಡುತ್ತಾರೆ. ಬಾಬಾರವರು ಪರಿಕ್ರಮಣ ಹಾಕುವುದಕ್ಕೆ ಸೆಕೆಂಡ್ ಸಾಕು ಆದರೆ ಸಾಕಾರರೂಪದಲ್ಲಿ ಮಕ್ಕಳ ಮೂಲಕ ಸೇವೆಯ ಪರಿಕ್ರಮಣ ಹಾಕುತ್ತಾರೆ. ತಂದೆಯು ವಿಶ್ವದ ಪರಿಕ್ರಮಣ ಅಂದರೆ ಸೇವೆಯ ಪರಿಕ್ರಮಣವನ್ನು ಕೊಡಿಸುವುದಕ್ಕಾಗಿ ಹೋಗುತ್ತಿದ್ದೀರಿ. ಈ ವರ್ಷದ ವಿಶೇಷತೆಯಾಗಿದೆ 'ಚಕ್ರವರ್ತಿಭವ', ಮುಂದೆ-ಮುಂದೆ ತಂದೆಯಿರುತ್ತಾರೆ, ಹಿಂದೆ-ಹಿಂದೆ ತಾವು. ತಾವು ತಂದೆಯನ್ನು ಪರಿಕ್ರಮಣ ಹಾಕಿಸುತ್ತೀರಾ ಅಥವಾ ತಂದೆಯು ತನ್ನ ಜೊತೆಜೊತೆಗೆ ಪರಿಕ್ರಮಣ ಹಾಕಿಸುತ್ತಾರೆಯೇ.

ಇಂದು ವತನದಲ್ಲಿ ಎಲ್ಲಾ ಮಕ್ಕಳು ಸ್ನೇಹದಿಂದಂತು ತಲುಪಿದ್ದರು ಆದರೆ ಇಂದಿನ ಸಮರ್ಥದಿನವನ್ನಾಚರಿಸುವುದಕ್ಕಾಗಿ, ಸೇವೆಗಾಗಿ ಹೋಗಿರುವ ಶ್ರೇಷ್ಠಾತ್ಮರೂ ತಲುಪಿದ್ದರು. ಅವರ ಆತ್ಮೀಕ ವಾರ್ತಾಲಾಪವೂ ಬಹಳಚೆನ್ನಾಗಿತ್ತು. ಅವರು ತನ್ನ ವಿಶ್ವದ ಸೇವೆಯ ಅದ್ಭುತವಾದ ಪಾತ್ರವನ್ನು ನೋಡುತ್ತಾ ಖುಷಿಯಾಗುತ್ತಿದ್ದರು- ಹೇಗೆಂದರೆ, ಭಿನ್ನವಾದ ಶರೀರದಿಂದ ವಿಶ್ವದ ಸೇವೆಯ ಅಲೌಕಿಕ ರಹಸ್ಯಯುಕ್ತ ಪಾತ್ರವು ಎಂತಹದ್ದಾಗಿದೆ ಎಂಬುದನ್ನು ಬಾಪ್‌ದಾದಾರವರು ತಿಳಿಸುತ್ತಿದ್ದರು. ವಿಶ್ವದ ಪತಿತ-ಪಾವನಿ ಸರಸ್ವತಿ ನದಿಯ ಗಾಯನವೇ ಆಗಿದೆ. 'ಗುಪ್ತ ಸೇವಾಧಾರಿ', ಗಂಗೆ ಮತ್ತು ಯುಮುನಾ ನದಿಯು ಸಾಕಾರದಲ್ಲಿ ಪ್ರಸಿದ್ಧವಾಗಿದೆ. ಆದರೆ ಸರಸ್ವತಿಯ ಸೇವೆಯು ಗುಪ್ತರೂಪದಲ್ಲಿಯೂ ಕಂಡುಬರುತ್ತದೆ ಮತ್ತು ಪ್ರಖ್ಯಾತಿ ಆಗಿರುವ ವೀಣಾವಾದಿನಿಯ ನೆನಪಾರ್ಥರೂಪದಲ್ಲಿಯೂ ಇದೆ. ಮತ್ತು ಗುಪ್ತರೂಪದಲ್ಲಿ ಗುಪ್ತನದಿಯ ರೂಪದಲ್ಲಿ ನೆನಪಾರ್ಥವಿದೆ. ಎರಡೂ ಪಾತ್ರಗಳು ಅದ್ಭುತವಾಗಿದೆ. ಜನ್ಮದ ಮೂಲಕ ಸೇವೆಯ ಪಾತ್ರದ ಸಂಬಂಧವಿದೆ. ಎಲ್ಲಿ ವಿಜಯವೋ ಅಲ್ಲಿ ಜನ್ಮ, ಯಾವುದೇ ರಾಜ್ಯದ ಮೇಲೆ ವಿಜಯಿಗಳಾಗಿರುವುದಲ್ಲ ಆದರೆ ಜನ್ಮದ ಮೂಲಕ ವಿಕಾರಗಳ ಮೇಲೆ ವಿಜಯಿಯಾಗಿಬಿಡುತ್ತಾರೆ. ಎಲ್ಲಿ ಜನ್ಮವೋ ಅಲ್ಲಿ ವಿಜಯವಿದೆ, ಈ ರೀತಿಯಲ್ಲ- ಎಲ್ಲಿ ವಿಜಯವೋ ಅಲ್ಲಿ ಜನ್ಮ- ಇದೇನು ಅಲ್ಪಸ್ವಲ್ಪ ಗಾಯನವಿದೆಯೋ, ಪ್ರತ್ಯಕ್ಷದಲ್ಲಿ ಅದೇ ಪಾತ್ರದಲ್ಲಿಯೂ ನಡೆಯಲೇಬೇಕು. ಈಗ ಈ ವಿಶೇಷ ಸೇವಾಧಾರಿ, ಸಮಯದ ಮತ್ತು ಸಾಕಾರ ಸೇವಾಧಾರಿಯ ಸೇವೆಯ ಪಾತ್ರವು ಸಮಾಪ್ತಿಯಾದಾಗ, ಹೊಸರಾಜ್ಯದ ಲೇವಾದೇವಿಯ ಅದ್ಭುತವಾದ ಪಾತ್ರದ ಆದಿಯಾಗುತ್ತದೆ. ಅಂದಮೇಲೆ ಅಡ್ವಾನ್ಸ್ ಗ್ರೂಪ್, ಅದರಲ್ಲಿಯೂ ಯಾರು ವಿಶೇಷ ಹೆಸರುವಾಸಿಯಾಗಿರುವ ಆತ್ಮರಿದ್ದಾರೆಯೋ, ಅವರ ಸಂಘಟನೆಯು ಬಹಳ ಶಕ್ತಿಶಾಲಿಯಾಗಿದೆ. ಶ್ರೇಷ್ಠಜನ್ಮ, ಮೊದಲಜನ್ಮ ಕೊಡಿಸುವುದಕ್ಕಾಗಿ ಧರಣಿಯನ್ನು ತಯಾರಿ ಮಾಡುವ ಅದ್ಭುತಪಾತ್ರವು, ಈ ಆತ್ಮರ ಮೂಲಕ ತೀವ್ರಗತಿಯಿಂದ ನಡೆಯುತ್ತಿದೆ. ಹೇಗೆ ವಿನಾಶಕಾರಿಗಳು ಬಟನ್ ಒತ್ತುವುದಕ್ಕಾಗಿ ನಿಂತಿದ್ದಾರೆ. ಹಾಗೆಯೇ ದಿವ್ಯಜನ್ಮದ ಮೂಲಕ ಸ್ಥಾಪನೆ ಮಾಡಿಸುವುದಕ್ಕಾಗಿ ನಿಮಿತ್ತರಾಗಿರುವ ಅಡ್ವಾನ್ಸ್ ಸೇವೆಯ ಪಾರ್ಟಿಯು ಟಚಿಂಗ್ ಮಾಡುವುದಕ್ಕಾಗಿ, ಸಂದೇಶವನ್ನು ಕೊಡುವುದಕ್ಕಾಗಿ, ಪ್ರತ್ಯಕ್ಷ ಮಾಡುವುದಕ್ಕಾಗಿ ನಿಂತಿದ್ದಾರೆ. ಅವರ ಸಂಬಂಧದ ಸ್ನೇಹದಿಂದ ಪ್ರತ್ಯಕ್ಷ ಮಾಡುವರು. ಇವರೂ ಸಹ ವಿಚಿತ್ರಕಥೆಗಳ ರೂಪದಿಂದ ಸ್ಥಾಪನೆಯ ಜನ್ಮದ ಪಾತ್ರವು ನಿಗಧಿಯಾಗಿದೆ. ಮೊದಲು ಕೃಷ್ಣನ ಜನ್ಮ, ಅದರಹಿಂದೆಯೇ ರಾಧೆಯದಾಗುತ್ತದೆಯಲ್ಲವೆ. ಅಂದಮೇಲೆ ಜನ್ಮಸ್ಥಾನ ಮತ್ತು ಅವರ ಸ್ಥಿತಿಯೆರಡೂ ಸಂಪೂರ್ಣಕಾರ್ಯವನ್ನು ಸಮಾಪ್ತಿ ಮಾಡಿದನಂತರ ಜನ್ಮವಾಗುತ್ತದೆ ರಾಧೆಯದು. ಆದ್ದರಿಂದ ಅವನು(ಕೃಷ್ಣ) ದೊಡ್ಡವನು, ಅವಳು(ರಾಧೆ)ಚಿಕ್ಕವಳಾಗಿಬಿಡುತ್ತಾಳೆ. ಹೇಗೆ ಇಲ್ಲಿಯೂ ಸೇವೆಯ 'ಭಿನ್ನರೂಪದಲ್ಲಿ ಜನ್ಮಸ್ಥಾನ ಮತ್ತು ಸ್ಥಿತಿಯ ತಯಾರಿ ಮಾಡುವಂತಹ ಅದ್ಭುತವಾದ ಪಾತ್ರವಿದೆ. ಹೇಗೆ ಇಲ್ಲಿಯೂ ಕಾರೋಬಾರಿಗೆ ನಿಮಿತ್ತವಾಗಿರುವ ಜಗದಂಬಾರವರ ಕ್ಷೇತ್ರದಲ್ಲಿ ಧರಣಿಯನ್ನು ತಯಾರು ಮಾಡುವುದಕ್ಕಾಗಿ ಜಗದಂಬಾರವರು

ಮೊದಲು ಹೊರಟರು ಮತ್ತು ನಂತರ ತಂದೆಯು ಹೋದರು. ಇದೇರೀತಿ ಜಗದಂಬಾ ಮತ್ತು ಮುದ್ದಾದ ಮಗು ವಿಶ್ವಕಿಶೋರ್‌ರವರು ಜೊತೆಗಾರ, ಎದುರಿಸುವವರಾಗಿದ್ದರು. ಮೈದಾನದ ಸೇವೆಯಲ್ಲಿ ಮುಂದೆ ಬರುವವರಾಗಿದ್ದರು, ಹಾಗೆಯೇ ಈಗಲೂ ಭಿನ್ನರೂಪದಲ್ಲಿ ಕಾರ್ಯದ ಸಂಸ್ಕಾರವು ಅದೇ ಇದೆ. ಇಬ್ಬರ ಸ್ಥಾಪನೆಯ ಜನ್ಮದ ಕಥೆಯಲ್ಲಿ ಹೀರೋ ಪಾತ್ರಧಾರಿಯಾಗಿದ್ದಾರೆ. ಗರ್ಭಮಹಲನ್ನು ತಯಾರು ಮಾಡುತ್ತಿದ್ದಾರೆ. ಇಲ್ಲಂತು ಕಾರೋಬಾರಿನಲ್ಲಿ ನಿಮಿತ್ತವಾಗಿ ಎರಡು ಮೂರ್ತಿಗಳಾಗಿದ್ದಾರೆ ಅಂದಮೇಲೆ ಈ ಮಹಲನ್ನು ತಯಾರು ಮಾಡುವವರೂ ಸಹ ಅಷ್ಟೇ ಶಕ್ತಿಶಾಲಿಯಾಗಿರಬೇಕು. ಇಲ್ಲಿ ಸ್ಥಾಪನೆಯ ತಯಾರಿ ಮಾಡಲಾಯಿತು ಮತ್ತು ನಂತರ ಅಲ್ಲಿ ತಮ್ಮೆಲ್ಲರಿಗಾಗಿ ವಿಶೇಷ ಅಷ್ಟರತ್ನಗಳೇನಿದ್ದಾರೆ, ಅವರಿಗಾಗಿ ತಯಾರಿ ಮಾಡುತ್ತಿದ್ದಾರೆ, ಮಹಲನ್ನು ತಯಾರು ಮಾಡುತ್ತಿದ್ದಾರೆ. ಯಾವಾಗ ತಯಾರಿಯಾಗುತ್ತದೆಯೋ ಆಗ ಆತ್ಮರು ಅಲ್ಲಿಗೆ ಹೋಗುವರಲ್ಲವೆ. ಅಂದಮೇಲೆ ಈಗ ಅಪವಿತ್ರಸೃಷ್ಟಿಯಲ್ಲಿ ಪವಿತ್ರಮಹಲನ್ನು ತಯಾರು ಮಾಡುವಂತಹ ಎಷ್ಟೊಂದು ಶ್ರೇಷ್ಠಕಾರ್ಯವನ್ನು ಮಾಡಬೇಕಾಗುತ್ತದೆ! ಇಂತಹ ಶಕ್ತಿಶಾಲಿ ಆತ್ಮರು ಬೇಕಾಗಿದೆ. ಅವರಿಂದ ಈ ಶಕ್ತಿಶಾಲಿಯಾದ ಕಾರ್ಯವನ್ನು ಮಾಡಲು ಸಾಧ್ಯವಾಗಬೇಕು. ಅಂತಿಂತಹವರು ಮಾಡಲು ಸಾಧ್ಯವಿಲ್ಲ. ಅವರೂ ಸಹ ದಿನಾಂಕವನ್ನು ಕೇಳುತ್ತಿದ್ದಾರೆ- ಅದೇನೆಂದರೆ ಯಾವ ದಿನಾಂಕದೊಳಗೆ ಮಹಲು ತಯಾರಾಗಬೇಕು, ಅದಕ್ಕಾಗಿ ದಿನಾಂಕವನ್ನು ತಿಳಿಸಿರಿ. ಅವರಂತು ಹೇಳುತ್ತಾರೆ- ಸಾಕಾರಸೇವೆಯ ಪಾತ್ರವು ಸಮಾಪ್ತಿಯಾದಾಗ ನಮ್ಮ ಕಾರ್ಯದ ಆದಿಯಾಗುತ್ತದೆ. ಇವರ ಅಂತ್ಯ ನಮ್ಮ ಆದಿಯಾಗಿದೆ. ಮೊದಲು ಅಂತ್ಯವಾದಾಗಲೇ ನಂತರ ಆದಿಯಾಗುತ್ತದೆ, ಅಂದಮೇಲೆ ಸೇವೆಯ ಪಾತ್ರದ ಸಮಾಪ್ತಿಯ ದಿನಾಂಕವು ಯಾವುದಾಗಿದೆ? ಅದೇ ದಿನಾಂಕವು ನಂತರ ರಾಜ್ಯದ ಜನ್ಮದ್ದಾಗಿರುತ್ತದೆ. ಅವರ ವಾರ್ತಾಲಾಪವನ್ನು ಕೇಳಿದಿರಾ! ಅಲ್ಲಂತು ಎಲ್ಲಾ ಆತ್ಮರು ಇಮರ್ಜ್ ಆಗಿದ್ದರು ಆದರೆ ಅವರದೂ ಗ್ರೂಪ್‌ಗಳಿದ್ದವು.

ಸೇವಾಧಾರಿ ಮಕ್ಕಳನ್ನು ನೋಡುತ್ತಾ ಬಾಬಾ ಹೇಳಿದರು- ಸೇವೆಯ ಯೋಜನೆಯಂತು ಎಲ್ಲರೂ ಬಹಳ ಒಳ್ಳೆಯ ಯೋಜನೆಯನ್ನು ಮಾಡಿದ್ದೀರಿ ಆದರೆ ಎಲ್ಲರೂ ಸೇವೆಯ ಯೋಜನೆಯ ಸಫಲರೂ ಆಗ ಆಗುತ್ತೀರಿ, ಯಾವಾಗ ನಿಮಿತ್ತರಾಗಿರುವವರು ವಿಶೇಷ ಗಮನ ಕೊಡುತ್ತಾರೆ.

1. ಯಾವ ಆತ್ಮನಲ್ಲಿ ಯಾವ ವಿಶೇಷತೆಯಿದೆ, ಆ ವಿಶೇಷತೆಯ ಮೌಲ್ಯವನ್ನು ಕೊಡುತ್ತಾ, ಅವರನ್ನು ಉಮ್ಮಂಗ-ಉತ್ಸಾಹದಲ್ಲಿ ಮುಂದೆತರಬೇಕು, ಅದಕ್ಕಾಗಿ ನಿಮಿತ್ತರಾಗಿರುವವರೂ ಸಹ ಅವಿಶ್ರಾಂತ ಸೇವಾಧಾರಿಗಳಾಗಬೇಕಾಗುತ್ತದೆ.

2. ತಮ್ಮ ಸೇವಾಕೇಂದ್ರದ ಅಥವಾ ಯಾರೆಲ್ಲರೂ ಸಂಪರ್ಕದ ಸೇವಾಕೇಂದ್ರದವರಿದ್ದಾರೆಯೋ, ಅವರ ವಾತಾವರಣವನ್ನು ಆತ್ಮೀಯತೆಯನ್ನಾಗಿ ಮಾಡಿರಿ. ಅದರಿಂದ ಸ್ವಯಂನ ಮತ್ತು ಬರುವಂತಹ ಆತ್ಮರ ಹೊಸ-ಹೊಸ ಆತ್ಮರೇನು ಬರುತ್ತಾರೆಯೋ ಅವರು ಸಹಜವಾಗಿ ಉನ್ನತಿಯಾಗಲು ಸಾಧ್ಯವಾಗಬೇಕು. ಏಕೆಂದರೆ ವಾತಾವರಣವು ಧರಣಿಯನ್ನು ಮಾಡುತ್ತದೆ, ಅಂದಾಗ ಸೇವಾಕೇಂದ್ರದ ವಾತಾವರಣವು ಆತ್ಮೀಯವಾಗಿರಲಿ. ಯಾರೆಲ್ಲರೂ ಸೇವಾಕೇಂದ್ರದಲ್ಲಿ ಬರುತ್ತಾರೆಯೋ, ಅವರು ಒಂದು- ತನ್ನ ಗೃಹಸ್ಥ ವ್ಯವಹಾರದ ಜಂಜಾಟದಿಂದ ಬರುತ್ತಾರೆ, ಗೃಹಸ್ಥದ ವಾತಾವರಣದಿಂದ ಸುಸ್ತಾಗಿರುತ್ತಾರೆ. ಅಂದಮೇಲೆ ಅವರಿಗೆ ವಿಶೇಷ ಸಹಯೋಗದ ಅವಶ್ಯಕತೆಯಿರುತ್ತದೆ. ಅದಕ್ಕಾಗಿ ಆತ್ಮೀಯ ವಾಯುಮಂಡದ ಸಹಯೋಗವನ್ನು ಕೊಟ್ಟು ಸಹಜಪುರುಷಾರ್ಥಿಯನ್ನಾಗಿ ಮಾಡಬಹುದು. ಹೇಗೆ ಏರ್ ಕಂಡೀಷನ್ ವಾತಾವರಣವನ್ನೂ ರಚನೆ ಮಾಡುತ್ತದೆಯೋ, ಇದೇ ರೀತಿಯಿಂದ ಆತ್ಮೀಯತೆಯ ಆಧಾರದ ಮೇಲೆ ಸೇವಾಕೇಂದ್ರದ ವಾಯುಮಂಡಲವು ಈ ರೀತಿಯಿರಲಿ- ಈ ಸ್ಥಾನವು ಸಹಜವಾಗಿಯೇ ಉನ್ನತಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಸ್ಥಾನವಾಗಿದೆ ಎಂದು ಅನುಭವ ಮಾಡಲಿ. ಆದ್ದರಿಂದ ಸೇವಾಕೇಂದ್ರದಲ್ಲಿ ಬರುತ್ತಾರೆಂದರೆ, ಬರುತ್ತಿದ್ದಂತೆ ಹೊರಗಿನ ಹಾಗೂ ಸೇವಾಕೇಂದ್ರದಲ್ಲಿ ವ್ಯತ್ಯಾಸದ ಅನುಭವವಾಗಲಿ, ಇದರಿಂದ ಸ್ವತಹವಾಗಿಯೇ ಆಕರ್ಷಣೆಯಾಗಬೇಕು.

3. ಬ್ರಾಹ್ಮಣ ಪರಿವಾರದ ವಿಶೇಷತೆಯಾಗಿದೆ. ಅನೇಕರಾಗಿದ್ದರೂ ಒಂದೇ ಆಗಿದ್ದಾರೆ. ಅಂದಾಗ ಪ್ರತಿಯೊಂದು ಸೇವಾಕೇಂದ್ರದ ವಾತಾವರಣವು ಹೀಗಿರಲಿ, ಅದರಿಂದ ಎಲ್ಲರಿಗೂ ಅನುಭವವಾಗಲಿ- ಇವರು ಅನೇಕರಲ್ಲ ಆದರೆ ಒಂದೇ ಆಗಿದ್ದಾರೆ. ಏಕತೆಯ

ಪ್ರಕಂಪನಗಳು ಇಡೀ ವಿಶ್ವದಲ್ಲಿ ಒಂದುಧರ್ಮ, ಒಂದು ರಾಜ್ಯದ ಸ್ಥಾಪನೆಯನ್ನು ಮಾಡುತ್ತದೆ. ಈ ವಿಶೇಷ ಗಮನವನ್ನು ಕೊಟ್ಟು, ಭಿನ್ನತೆಯನ್ನು ಸಮಾಪ್ತಿ ಮಾಡುತ್ತಾ ಏಕತೆಯನ್ನು ತರಬೇಕಾಗಿದೆ.

ಈ ಹೊಸವರ್ಷದಲ್ಲಿ ವಿಶೇಷವಾಗಿ ಮೂರೂಮಾತುಗಳನ್ನು ಪ್ರತ್ಯಕ್ಷದಲ್ಲಿ ತರಬೇಕು. ಕೇಳುವುದು-ಹೇಳುವುದಂತು ನಡೆಯುತ್ತಿರುತ್ತದೆ ಆದರೆ ಈ ವರ್ಷದಲ್ಲಿ ಈ ಮೂರುಮಾತುಗಳನ್ನು ಪ್ರತ್ಯಕ್ಷದಲ್ಲಿ ತನ್ನಿರಿ, ಸೇವಾಧಾರಿಯು ಸ್ವಯಂಗಾಗಿ ಅಲ್ಲ ಆದರೆ ಸೇವೆಗಾಗಿ ಸೇವಾಧಾರಿ ಆಗಿರುವುದು, ಸ್ವಯಂನದೆಲ್ಲವೂ ಸೇವೆಗಾಗಿ ಸ್ವಾಹಾ ಮಾಡುವವರಾಗಿದ್ದೀರಿ. ಹೇಗೆ ಸಾಕಾರತಂದೆಯು ಶ್ವಾಸವನ್ನೂ ಸಹ ಸೇವೆಯಲ್ಲಿ ಸ್ವಾಹಾ ಮಾಡಿದರಲ್ಲವೆ. ಹಾಗೆಯೇ ಪ್ರತಿಯೊಂದು ಕರ್ಮೇಂದ್ರಿಯಗಳ ಮೂಲಕ ಸದಾ ಸೇವೆಯಾಗುತ್ತಿರಬೇಕು. ಮುಖದಿಂದಲೂ ಸೇವೆ, ನಯನ ಗಳಿಂದಲೂ ಸೇವೆ, ಸೇವೆಯೇ ಸೇವೆಯಿರಬೇಕು. ಅಂದಾಗ ಎಲ್ಲರೂ ಇಂತಹ ಸೇವಾಧಾರಿಗಳಲ್ಲವೆ.

ಯೋಜನೆಯನ್ನು ಬಹಳಚೆನ್ನಾಗಿ ಮಾಡಿದ್ದೀರಿ, ಈಗ ಪ್ರತ್ಯಕ್ಷದ ಲಿಸ್ಟ್ ಬರುತ್ತದೆ. ಹೇಗೆ ಯೋಜನೆಯ ಫೈಲ್ ಬಂದುಬಿಟ್ಟಿದೆ ಹಾಗೆಯೇ ಯೋಜನೆಯ ಫಲಿತಾಂಶವೂ ಬರುತ್ತದೆ. ಒಳ್ಳೆಯದು- ಎಲ್ಲರೂ 108ರ ಮಾಲೆಯಲ್ಲಿ ಬರುವವರಾಗಿದ್ದೀರಲ್ಲವೆ. ಎಲ್ಲಾ ಘೋಷಣೆಯೂ ಸ್ವತಹವಾಗಿಯೇ ಆಗಿಬಿಡುತ್ತದೆ. ಪ್ರತಿಯೊಬ್ಬರೂ ತಮ್ಮ ಸ್ಥಾನವನ್ನು ತೆಗೆದುಕೊಳ್ಳುತ್ತಾ, ತಮ್ಮ ನಂಬರನ್ನು ಘೋಷಣೆ ಮಾಡುತ್ತಾರೆ. ಸೇವೆಯೇ ಸ್ಥಾನದ ನಂಬರನ್ನು ಘೋಷಿಸುತ್ತದೆ. ಸೇವೆಯು ಮೈಕ್ ಆಗುತ್ತದೆ, ಮುಖದ ಮೈಕ್ ಘೋಷಣೆಯನ್ನು ಮಾಡುವುದಿಲ್ಲ.

ಅವ್ಯಕ್ತ ಮುರಳಿ/ರಿವೈಸ್ ಕೋರ್ಸ್ 18-01-1980.

***ಸ್ಮೃತಿ ದಿನದಂದು ಮಕ್ಕಳ ಪ್ರತಿ ಬಾಪ್‌ದಾದಾರವರ ಶಿಕ್ಷಣ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1.ನಾನು ಬಾಪ್‌ದಾದಾರವರಿಂದ ಪಡೆದ "ಸದಾ ಸಮರ್ಥ ಭವ" ಎಂಬ ವರದಾನವನ್ನು ಸ್ವೀಕರಿಸಿದ್ದೇನೆ.

2. ನಾನು ಸಹಜಯೋಗಿ, ನಿರಂತರಯೋಗಿ, ಯೋಗಯುಕ್ತ, ಜೀವನ್ ಮುಕ್ತ, ಫರಿಶ್ತಾ ಸ್ವರೂಪವಾಗಿ ಸದಾ ಇದ್ದೇನೆ.

3. ನಾನು ತಂದೆಯ ಸಮಾನ 'ಅತೀತ ಮತ್ತು ಪ್ರಿಯ' ಆಗಿದ್ದೇನೆ.

4. ನಾನು ಶ್ರೇಷ್ಠಸಂಕಲ್ಪ ಅಥವಾ ವಾಚಾದಿಂದ ಸ್ನೇಹ ಮತ್ತು ಶಕ್ತಿಶಾಲಿ ಮಾತಿನಿಂದ ತಂದೆಯನ್ನು ಪ್ರತ್ಯಕ್ಷ ಮಾಡಿದ್ದೇನೆ.

5. ನಾನು ತೃಪ್ತ ಆತ್ಮನಾಗಿ ಸ್ಮೃತಿ ಮತ್ತು ಸೇವೆಯ ಸಮಾನತೆಯಲ್ಲಿ ಇದ್ದೇನೆ.

6. ನಾನು ಸದಾ ದಯಾಸಾಗರನಾಗಿ ಸರ್ವ ಆತ್ಮರಿಗೆ ಆಶೀರ್ವಾದಗಳನ್ನು ಕೊಟ್ಟಿದ್ದೇನೆ.

7.. ನಾನು ಪ್ರಶ್ನಾರ್ಥಕವನ್ನು ಸದಾ ಕಾಲಕ್ಕಾಗಿ ಬಿಳ್ಕೊಡುಗೆ ಕೊಟ್ಟು, ಬಿಂದುವಿಟ್ಟು ಸರ್ವಶಕ್ತಿಗಳ ಸ್ಟಾಕ್ ಅನ್ನು ಜಮಾ ಮಾಡಿಕೊಂಡು ಸರ್ವರ ಪ್ರತಿ ವಿಘ್ನ ವಿನಾಶಕ ಆಗಿದ್ದೇನೆ.

8. ನಾನು ಸರ್ವ ವಿಘ್ನಮುಕ್ತವಾಗಿ ಹೊಳೆಯುವ ಫರಿಶ್ತಾ ವಸ್ತ್ರವನ್ನು ಧರಿಸಿ ಸದಾ ಸರ್ವ ಗುಣಗಳ ಆಭರಣಗಳಿಂದ ಅಲಂಕರಿಸಿಕೊಂಡು ಶಸ್ತ್ರಗಳಿಂದ ಸದಾ ಅಷ್ಟ ಶಕ್ತಿ ಶಸ್ತ್ರಧಾರಿ ಸಂಪನ್ನ ಮೂರ್ತಿಯಾಗಿದ್ದೇನೆ.

9. ನಾನು ಶಿವಶಕ್ತಿ ಕಂಬೈನ್ಡ್ ರೂಪದಲ್ಲಿ ಮನಸ್ಸು, ವೃತ್ತಿಯಿಂದ ಸುಖ, ಶಾಂತಿ ಪ್ರೇಮ, ಆನಂದ ವಿವಿಧ ಶ್ರೇಷ್ಠ ತರಂಗಗಳ ಸುವಾಸನೆಯನ್ನು ವ್ಯಾಪಿಸಿದ್ದೇನೆ. (ಶಿವ ಅರ್ಥಾತ್ ವಿಶ್ವಕಲ್ಯಾಣಕಾರಿ ಶಕ್ತಿ ವಿಶ್ವ ವರದಾನಿ)

10. ನಾನು ತನು, ಮನ, ಧನ ಎಲ್ಲವನ್ನು ಉಪಯೋಗಿಸಿ ಯಾರು ಮುಕ್ತಿಗೆ ಯೋಗ್ಯರು, ಯಾರು ಜೀವನ್ ಮುಕ್ತಿಗೆ ಯೋಗ್ಯರೋ ತಿಳಿದುಕೊಂಡು ಅವರಿಗೆ ಆ ವಿಧವಾದ ಸಂದೇಶವನ್ನು ಕೊಟ್ಟು ಸೇವೆಯ ಫೈಲ್ ಅನ್ನು ಸಂಪೂರ್ಣ ಮಾಡಿದ್ದೇನೆ.

11. ಸೇವಾಧಾರಿಯಾದ ನಾನು ಪ್ರತಿ ಆತ್ಮನಿಗೆ ಮುಕ್ತಿ, ಜೀವನ್ ಮುಕ್ತಿಯ ಸಹಿಯನ್ನು ಮಾಡಿ ಫೈನಲ್ ಸ್ಟ್ಯಾಂಪ್ ಹಾಕಿ ಫೈಲ್ ಅನ್ನು ಸಂಪೂರ್ಣ ಮಾಡಿದ್ದೇನೆ.